# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **677** |
| 2 ಸದಸ್ಯರ ಹೆಸರು | : | **ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು)** |
| 3 ಉತ್ತರಿಸುವ ದಿನಾಂಕ | : | 23.12.2022 |
| 4 ಉತ್ತರಿಸುವ ಸಚಿವರು | : | ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2020-21 ಮತ್ತು 2021-22ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)<br><table><tr><th>ಕ್ರ. ಸಂ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr><tr><td>1</td><td>2020-21</td><td>1031.86</td></tr><tr><td>2</td><td>2021-22</td><td>1492.97</td></tr></table><br>ಆಯವ್ಯಯದಲ್ಲಿ ಘೋಷಿಸಿದ ಅನುದಾನಕ್ಕೆ ಡಾ॥ ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿ ಹಾಗೂ ಇತರೆ ಮಾನದಂಡಗಳ ಆಧಾರದ ಮೇಲೆ ಅನುದಾನ ನಿಗದಿಪಡಿಸಲು ಅಭಿವೃದ್ಧಿ ಸೂಚ್ಯಾಂಕವನ್ನು (ಸಿ.ಡಿ.ಐ) ಬೆಂಚ್ ಮಾರ್ಕ್‌ಯೆಂದು ಪರಿಗಣಿಸಿ, ತಾಲ್ಲೂಕಾವನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಮೈಕ್ರೋ ಯೋಜನೆಯಡಿ ತಾಲ್ಲೂಕುವಾರು ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಅದರಂತೆ ಮ್ಯಾಕ್ರೋ ಯೋಜನೆಯಡಿ ಜಿಲ್ಲಾವಾರು ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ಮಂಡಳಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಿರುವುದಿಲ್ಲ. |
| (ಆ) | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸದಸ್ಯರಾಗಿರುವರು ಯಾರು ಯಾರು; (ಶಾಸಕರ ವಿವರ ನೀಡುವುದು) | ಪ್ರಸ್ತುತ ಮಂಡಳಿಗೆ ಒಬ್ಬರು ಅಧ್ಯಕ್ಷರು, ಎಂಟು ಜನ ವಿಧಾನ ಸಭೆಯ ಸದಸ್ಯರು, ಇಬ್ಬರು ವಿಧಾನ ಪರಿಷತ್ ಸದಸ್ಯರು ಹಾಗೂ ಒಬ್ಬರು ಸಂಸತ್ತಿನ ಸದಸ್ಯರನ್ನು ನೇಮಕ ಮಾಡಲಾಗಿದೆ. ವಿವರ ಈ ಕೆಳಗಿನಂತಿವೆ.<br><table><tr><th>ಕ್ರ.ಸಂ</th><th>ಹೆಸರು ಮತ್ತು ಪದನಾಮ</th></tr><tr><td>1</td><td>ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ, ಮಾನ್ಯ ಅಧ್ಯಕ್ಷರು ಕೆಕೆಆರ್ ಡಿ ಬಿ ಹಾಗೂ ಮಾನ್ಯ ವಿಧಾನ ಸಭಾ ಸದಸ್ಯರು, ಕಲಬುರಗಿ (ದಕ್ಷಿಣ)</td></tr><tr><td>2</td><td>ಶ್ರೀ ಎನ್.ವೈ.ಗೋಪಾಲಕೃಷ್ಣ, ಮಾನ್ಯ ವಿಧಾನ ಸಭಾ ಸದಸ್ಯರು, ಕೂಡ್ಲಿಗಿ.</td></tr><tr><td>3</td><td>ಶ್ರೀ ಸುಭಾಷ್ ಗುತ್ತೇದಾರ್, ಮಾನ್ಯ ವಿಧಾನ ಸಭಾ ಸದಸ್ಯರು, ಆಳಂದ.</td></tr><tr><td>4</td><td>ಶ್ರೀ ಶರಣ ಬಸಪ್ಪಗೌಡ ದರ್ಶನಾಪುರ</td></tr></table> |

<table>
<tr><td></td><td></td><td></td><td>ಮಾನ್ಯ ವಿಧಾನ ಸಭಾ ಸದಸ್ಯರು, ಶಹಾಪೂರ.</td></tr>
<tr><td></td><td></td><td>5</td><td>ಶ್ರೀ ಬಂಡೆಪ್ಪ ಕಾಶೆಂಪುರ್, ಮಾನ್ಯ ವಿಧಾನ ಸಭಾ ಸದಸ್ಯರು, ಬೀದರ್ ದಕ್ಷಿಣ.</td></tr>
<tr><td></td><td></td><td>6</td><td>ಶ್ರೀ ಸೋಮಶೇಖರ ರೆಡ್ಡಿ, ಮಾನ್ಯ ವಿಧಾನ ಸಭಾ ಸದಸ್ಯರು, ಬಳ್ಳಾರಿ ನಗರ.</td></tr>
<tr><td></td><td></td><td>7</td><td>ಶ್ರೀ ಪರಣ್ಣ ಮುನವಳ್ಳಿ, ಮಾನ್ಯ ವಿಧಾನ ಸಭಾ ಸದಸ್ಯರು, ಗಂಗಾವತಿ.</td></tr>
<tr><td></td><td></td><td>8</td><td>ಶ್ರೀ ಬಸವರಾಜ ಮುಟ್ಟಿಮುಡ್, ಮಾನ್ಯ ವಿಧಾನ ಸಭಾ ಸದಸ್ಯರು, ಗುಲ್ಬರ್ಗಾ ಗ್ರಾಮಾಂತರ.</td></tr>
<tr><td></td><td></td><td>9</td><td>ಶ್ರೀ ವೆಂಕಟರೆಡ್ಡಿ ಮುದ್ನಾಳ, ಮಾನ್ಯ ವಿಧಾನ ಸಭಾ ಸದಸ್ಯರು, ಯಾದಗಿರಿ.</td></tr>
<tr><td></td><td></td><td>10</td><td>ಶ್ರೀ ಬಿ.ಜಿ.ಪಾಟೀಲ್, ಮಾನ್ಯ ವಿಧಾನ ಪರಿಷತ್ ಸದಸ್ಯರು</td></tr>
<tr><td></td><td></td><td>11</td><td>ಶ್ರೀ ರಘುನಾಥರಾವ್ ಮುಲ್ಕಾಪುರೆ, ಮಾನ್ಯ ವಿಧಾನ ಪರಿಷತ್ ಸದಸ್ಯರು.</td></tr>
<tr><td></td><td></td><td>12</td><td>ಶ್ರೀ ರಾಜಾ ಅಮರೇಶ್ವರ ನಾಯಕ, ಮಾನ್ಯ ಲೋಕಸಭಾ ಸದಸ್ಯರು, ರಾಯಚೂರು.</td></tr>
<tr><td>(ಇ)</td><td>ಕಲ್ಯಾಣ ಕರ್ನಾಟಕದ ಪ್ರದೇಶಾಭಿವೃದ್ಧಿ ಮಂಡಳಿಯ ಯಾರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಗುವುದು; ಕಾಮಗಾರಿಗಳ ಆಯ್ಕೆ ಮತ್ತು ಕ್ರಿಯಾ ಯೋಜನೆಯ ತಯಾರಿಯಲ್ಲಿ ಅದರ ಪಾತ್ರವೇನು;</td><td colspan="2">ಕಲ್ಯಾಣ (ಹಿಂದಿನ ಹೈದ್ರಾಬಾದ) ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಆರ್:ಪಿಎಲ್ಎಕ್ಸ್:2012, ದಿನಾಂಕ: 06.11.2013ರನ್ವಯ ರಚನೆಯಾಗಿದ್ದು, 2013 ರಿಂದ ಪ್ರಾರಂಭವಾಗಿದೆ.<br><br>ಮಂಡಳಿಯ ಆಡಳಿತ ಮಂಡಳಿಗೆ ಒಬ್ಬರು ಅಧ್ಯಕ್ಷರು, ಎಂಟು ಜನ ವಿಧಾನ ಸಭೆಯ ಸದಸ್ಯರು, ಇಬ್ಬರು ವಿಧಾನ ಪರಿಷತ್ ಸದಸ್ಯರು, ಒಬ್ಬರು ಸಂಸತ್ತಿನ ಸದಸ್ಯರು, ಒಬ್ಬರು ಜಿಲ್ಲಾ ಪಂಚಾಯತ ಅಧ್ಯಕ್ಷರು, ಒಬ್ಬರು ಸ್ಥಳೀಯ ಸಂಸ್ಥೆಯ ಅಧ್ಯಕ್ಷ/ಮೇಯರ್ ಮತ್ತು ಐದು ಜನ ತಜ್ಞರನ್ನು ಮಂಡಳಿಯ ಕಾಯ್ದೆ ಪ್ರಕಾರ ಆಯ್ಕೆ ಮಾಡಲಾಗುತ್ತದೆ.<br>ಆಯವ್ಯಯದಲ್ಲಿ ಘೋಷಿಸಿದ ಅನುದಾನಕ್ಕೆ ಡಾ|| ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿ ಹಾಗೂ ಇತರೆ ಮಾನದಂಡಗಳ ಆಧಾರದ ಮೇಲೆ ಅನುದಾನ ನಿಗದಿಪಡಿಸಲು ಅಭಿವೃದ್ಧಿ ಸೂಚ್ಯಾಂಕವನ್ನು (ಸಿ.ಡಿ.ಐ) ಬೆಂಚ್ ಮಾರ್ಕಯೆಂದು ಪರಿಗಣಿಸಿ, ತಾಲ್ಲೂಕಾವನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಮೈಕ್ರೋ ಯೋಜನೆಯಡಿ ತಾಲ್ಲೂಕುವಾರು ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಅದರಂತೆ ಮ್ಯಾಕ್ರೋ ಯೋಜನೆಯಡಿ ಜಿಲ್ಲಾವಾರು ಅನುದಾನ ಹಂಚಿಕೆ ಮಾಡಲಾಗುತ್ತಿದೆ.<br>ಮೈಕ್ರೋ ಅಡಿಯಲ್ಲಿ ಆಯಾ ಜಿಲ್ಲೆಯ ಶಾಸಕರುಗಳು ಪ್ರಸ್ತಾವನೆಯನ್ನು ತಯಾರಿಸಿ</td></tr>
</table>

| | | |
|---|---|---|
| | | ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತಾರೆ. ಜಿಲ್ಲೆಯ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಡಳಿಗೆ ಪ್ರಸ್ತಾವನೆಯನ್ನು ಸಲ್ಲಿಸುತ್ತಾರೆ ಹಾಗೂ ಮ್ಯಾಕ್ರೋ ಯೋಜನೆಯನ್ನು ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ "ಜಿಲ್ಲಾ ಸಲಹಾ ಸಮಿತಿ" ಯಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು ಮಂಡಳಿಗೆ ಸಲ್ಲಿಸುತ್ತಾರೆ. |
| (ಈ) | ಕಲ್ಯಾಣ ಕರ್ನಾಟಕಕ್ಕೆ ಸೇರಿದ ತಾಲ್ಲೂಕನ್ನು ನೋಡೆಲ್ ತಾಲ್ಲೂಕು ಆಗಿ ಆಯ್ಕೆ ಮಾಡಿದ್ದರೂ ಸಹ ಕೆಲವು ಶಾಸಕರನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸಭೆಗಳಿಗೆ ಆಹ್ವಾನಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | - ಇಲ್ಲ -<br><br>-ಅನ್ವಯಿಸುವುದಿಲ್ಲ- |

ಸಂಖ್ಯೆ: ಪಿಡಿಎಸ್ 209 ಹೆಚ್‌ಕೆಡಿ 2022

(ಮುನಿರತ್ನ)
ಸಚಿವರು ಯೋಜನೆ,ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ
ಇಲಾಖೆ